ದಾವಣಗೆರೆ ವಿಶ್ವವಿದ್ಯಾನಿಲಯ
ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ-577002
ದೂರವಾಣಿ ಸಂಖ್ಯೆ: 08192-208420/208104

ಸಂಖ್ಯೆ: ದಾವಿವಿ:ಪವಿ:2018-19/ 4282 ದಿನಾಂಕ:05-01-2019

## ಆರನೇ ವಾರ್ಷಿಕ ಘಟಿಕೋತ್ಸವದ ಅಧಿಸೂಚನೆ

ದಾವಣಗೆರೆ ವಿಶ್ವವಿದ್ಯಾನಿಲಯದ ಆರನೇ ವಾರ್ಷಿಕ ಘಟಿಕೋತ್ಸವವು ಜನವರಿ/ಫೆಬ್ರವರಿ-2019 ರಲ್ಲಿ ನಡೆಯಲಿದ್ದು ಅಭ್ಯರ್ಥಿಗಳ ಮಾಹಿತಿಗಾಗಿ ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

**ಕೆಳಕಂಡ ಪದವಿಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಘಟಿಕೋತ್ಸವಕ್ಕೆ ಪ್ರವೇಶ ಪಡೆಯಲು ಅವಕಾಶವಿದೆ.**

<table>
<tr><th>ಕ್ರ.ಸಂ</th><th>ಅಭ್ಯರ್ಥಿಗಳು</th><th>ಪೂರ್ಣಗೊಂಡ ವರ್ಷ</th><th colspan="2">ಪೂರ್ಣಗೊಳಿಸಿದ ಪದವಿ ಪರೀಕ್ಷೆಗಳು</th></tr>
<tr><td rowspan="3">1.</td><td rowspan="3">ಪಿಹೆಚ್.ಡಿ/ಎಂ.ಫಿಲ್</td><td>ನವೆಂಬರ್/ಡಿಸೆಂಬರ್-2017<br>ಮೇ/ಜೂನ್-2018</td><td colspan="2">ಪಿಹೆಚ್.ಡಿ/ಎಂ.ಫಿಲ್</td></tr>
<tr><td rowspan="2">ಶುಲ್ಕದ ವಿವರ</td><td>ಸಾಮಾನ್ಯ (ರೂ)</td><td>ಪ.ಜಾ/ಪ.ಪಂ/ಪ್ರವರ್ಗ-1 (ರೂ)</td></tr>
<tr><td>2110-00</td><td>1850-00</td></tr>
</table>

ಸೂಚನೆ:-ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಡಿ.ಡಿ ಮತ್ತು ಅಂಕಪಟ್ಟಿಗಳ ಜೆರಾಕ್ಸ್ ಪ್ರತಿ (ಕ್ರೋಢಿಕೃತ ಅಂಕಪಟ್ಟಿ)ಗಳೊಂದಿಗೆ ಪ್ರಾಂಶುಪಾಲರು/ವಿಭಾಗಗಳ ಅಧ್ಯಕ್ಷರು/ಕೋ-ಆರ್ಡಿನೇಟರ್‌ಗಳಿಗೆ ಸಲ್ಲಿಸುವುದು. ಪ್ರಾಂಶುಪಾಲರು /ವಿಭಾಗಗಳ ಅಧ್ಯಕ್ಷರು/ಕೋ-ಆರ್ಡಿನೇಟರ್‌ಗಳು ಪರಿಶೀಲಿಸಿದ ನಂತರ ಎಲ್ಲಾ ಅರ್ಜಿಗಳನ್ನು ಕ್ರೋಢಿಕರಿಸಿದ ನಂತರ ಕುಲಸಚಿವರು (ಪರೀಕ್ಷಾಂಗ) ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577007. ಇವರಿಗೆ ದಿನಾಂಕ:21-01-2019 ರೊಳಗಾಗಿ ಸಲ್ಲಿಸುವುದು. ವಿದ್ಯಾರ್ಥಿಗಳು ನೇರವಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಅಭ್ಯರ್ಥಿಗಳಿಗೆ ಸೂಚನೆಗಳು:

1. ಪಿಹೆಚ್.ಡಿ/ಎಂ.ಫಿಲ್ ಪದವಿಗೆ ಪ್ರವೇಶ ಪಡೆಯುವ ಶೈಕ್ಷಣಿಕ ಸಾಲು ನವೆಂಬರ್/ಡಿಸೆಂಬರ್-2017 ಮತ್ತು ಮೇ/ಜೂನ್-2018 (ಎರಡು ವರ್ಷ) ಸಂಧರ್ಭದಲ್ಲಿ ಘಟಿಕೋತ್ಸವ ಶುಲ್ಕವನ್ನು ಪಾವತಿಸಿರುವ ಅಭ್ಯರ್ಥಿಗಳು ಮತ್ತೆ ಪಾವತಿಸಬೇಕಾಗಿಲ್ಲ.
2. ಶುಲ್ಕವನ್ನು ಪಾವತಿಸಿರುವ ರಸೀದಿ/ಚಲನ್‌ನ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.
3. ಘಟಿಕೋತ್ಸವದ ನಿಗದಿತ ದಿನ, ಸಮಯ, ಮತ್ತು ಸ್ಥಳವನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲ ತಾಣ/ಪತ್ರಿಕೆ/ಮಾಧ್ಯಮಗಳಲ್ಲಿ ನಂತರದಲ್ಲಿ ಪ್ರಕಟಿಸಲಾಗುವುದು. ಮತ್ತು ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ / ಘಟಕ ಕಾಲೇಜುಗಳಿಗೆ ಮಾಹಿತಿಯನ್ನು ಕಳುಹಿಸಿಕೊಡಲಾಗುವುದು.
4. ಪದವಿ ಪ್ರಮಾಣ ಪತ್ರ/ ರ್‍ಯಾಂಕ್ /ಚಿನ್ನದ ಪದಕ / ನಗದು ಬಹುಮಾನಕ್ಕಾಗಿ ಅಭ್ಯರ್ಥಿಗಳು ಅರ್ಜಿ ನಮೂನೆಗಳನ್ನು ಕೆಳಕಂಡಂತೆ ಪಡೆಯಬಹುದು.

   iii) ತಾವು ವ್ಯಾಸಂಗ ಮಾಡಿದ ಸಂಬಂಧಪಟ್ಟ ಕಾಲೇಜು /ವಿಭಾಗ/ ಸಂಸ್ಥೆಗಳಿಂದ ಅಥವಾ

   iv) ವಿಶ್ವವಿದ್ಯಾನಿಲಯದ ಜಾಲತಾಣ **www.davangereuniversity.ac.in** ಇಲ್ಲಿಂದ ಡೌನ್ ಲೋಡ್ ಮಾಡಿಕೊಳ್ಳುವುದು.

5. ಘಟಿಕೋತ್ಸವದ ಶುಲ್ಕದಲ್ಲಿಯೇ ಅರ್ಜಿ ಶುಲ್ಕವೂ ಸೇರಿರುವುದರಿಂದ ಅರ್ಜಿ ನಮೂನೆಗಾಗಿ ಪ್ರತ್ಯೇಕ ಶುಲ್ಕವನ್ನು ಪಾವತಿಸಬೇಕಾಗಿಲ್ಲ.
6. ಪದವಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವ ಎಲ್ಲಾ ಅಭ್ಯರ್ಥಿಗಳೂ ಶುಲ್ಕವನ್ನು ಡಿ.ಡಿ ಮೂಲಕ ಪಾವತಿಸಬೇಕು. ಡಿ.ಡಿಯನ್ನು ಅರ್ಜಿಗೆ ಲಗತ್ತಿಸಿರಬೇಕು.
7. ಡಿ.ಡಿಯನ್ನು **ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ** ಇವರಿಗೆ ಪಾವತಿಯಾಗುವಂತೆ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ವಿಶ್ವವಿದ್ಯಾನಿಲಯ ಶಾಖೆ, ದಾವಣಗೆರೆ** ಇವರ ಹೆಸರಿನಲ್ಲಿ ತೆಗೆಸಿರಬೇಕು. ಬೇರೆ ಬ್ಯಾಂಕುಗಳಿಂದ ತೆಗೆಸಿದ ಡಿ.ಡಿ ಗಳನ್ನು ಅಂಗೀಕರಿಸಲಾಗುವುದಿಲ್ಲ ಮತ್ತು ಅರ್ಜಿಯು ತಿರಸ್ಕರಿಸಲ್ಪಡುವುದು.
8. ಪ.ಜಾ/ಪ.ಪಂ/ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣಪತ್ರವನ್ನು ಲಗತ್ತಿಸಿರಬೇಕು.
9. ಪ್ರಾಚಾರ್ಯರು / ವಿಭಾಗದ ಅಧ್ಯಕ್ಷರು / ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಎಲ್ಲಾ ಸೆಮಿಸ್ಟರ್‌ನ ಅಂಕಪಟ್ಟಿಗಳ ಪ್ರತಿಗಳನ್ನು ಲಗತ್ತಿಸಿರಬೇಕು.
10. **ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಡಿ.ಡಿ ಮತ್ತು ಅಂಕಪಟ್ಟಿಗಳ ಜೆರಾಕ್ಸ್ ಪ್ರತಿ (ಕ್ರೋಢಿಕೃತ ಅಂಕಪಟ್ಟಿಗಳೊಂದಿಗೆ ಪ್ರಾಂಶುಪಾಲರು/ವಿಭಾಗಗಳ ಅಧ್ಯಕ್ಷರು/ಕೋ-ಆರ್ಡಿನೇಟರ್‌ಗಳಿಗೆ ಸಲ್ಲಿಸುವುದು. ಪ್ರಾಂಶುಪಾಲರು /ವಿಭಾಗಗಳ ಅಧ್ಯಕ್ಷರು/ಕೋ-ಆರ್ಡಿನೇಟರ್‌ಗಳು ಪರಿಶೀಲಿಸಿದ ನಂತರ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿದ ನಂತರ ಕುಲಸಚಿವರು (ಪರೀಕ್ಷಾಂಗ) ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577007. ಇವರಿಗೆ 21-01-2019 ದಿನಾಂಕದೊಳಗಾಗಿ ಸಲ್ಲಿಸುವುದು. ವಿದ್ಯಾರ್ಥಿಗಳು ನೇರವಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**
11. ಪಿಹೆಚ್.ಡಿ/ಎಂ.ಫಿಲ್ ವಿದ್ಯಾರ್ಥಿಗಳು ಘಟಿಕೋತ್ಸವ ಶುಲ್ಕವನ್ನು ದಿನಾಂಕ:16-01-2019 ರಲ್ಲಿ ಸಲ್ಲಿಸದೇ ಘಟಿಕೋತ್ಸವದ ನಂತರ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿದಲ್ಲಿ ಘಟಿಕೋತ್ಸವ ಶುಲ್ಕದೊಂದಿಗೆ ಹೆಚ್ಚುವರಿಯಾಗಿ ರೂ.1500/- ಗಳ ದಂಡ ಶುಲ್ಕ ವಿಧಿಸಲಾಗುತ್ತದೆ.
12. ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿ ನಮೂನೆಯನ್ನೊಳಗೊಂಡ ಲಕೋಟೆಯ ಮೇಲೆ ದಪ್ಪ ಅಕ್ಷರಗಳೊಂದಿಗೆ **ಆರನೇ ಘಟಿಕೋತ್ಸವಕ್ಕಾಗಿ ಅರ್ಜಿ** ಎಂದು ನಮೂದಿಸಿರಬೇಕು.
13. ಇತರೆ ವಿವರಗಳನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಕೊಡಲಾಗಿದೆ.
14. ಅಪೂರ್ಣವಾದ, ತಪ್ಪುಗಳಿಂದ ಕೂಡಿದ, ಕೊನೆಯ ದಿನಾಂಕದ ನಂತರ ಸ್ವೀಕೃತವಾದ, ಪ್ರಾಂಶುಪಾಲರುಗಳಿಂದ ಬರದ ಮತ್ತು ನಿಗದಿತ ಅಡಕಗಳನ್ನೊಳಗೊಂಡಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
15. ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಮುಂದಿನ ಘಟಿಕೋತ್ಸವಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
16. ವಿದ್ಯಾರ್ಥಿಗಳ ಅರ್ಜಿಯಲ್ಲಿ ನಮೂದಿಸಿದಂತೆ ಹೆಸರು (ಇಂಗ್ಲೀಷ್ ಮತ್ತು ಕನ್ನಡ), ಪದವಿ ಮುಂತಾದ ಮಾಹಿತಿಯನ್ನು ಯಥಾವತ್ತಾಗಿ ಪದವಿ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿರುತ್ತದೆ. ಮನಃ ಪ್ರಮಾಣ ಪತ್ರದಲ್ಲಿ ತಿದ್ದುಪಡಿ ಇದ್ದಲ್ಲಿ ಪಿಹೆಚ್.ಡಿ/ಎಂ.ಫಿಲ್ ವಿದ್ಯಾರ್ಥಿಗಳಿಗೆ ರೂ.500/-ಗಳ ಶುಲ್ಕವನ್ನು ಪಡೆಯಲಾಗುವುದು.
17. **ಪಿಹೆಚ್.ಡಿ/ಎಂ.ಫಿಲ್ ಪದವಿ ಪಡೆದ ಅಭ್ಯರ್ಥಿಗಳು ದಿನಾಂಕ:12/01/2018ರ ಒಳಗೆ ಪತ್ರ ವ್ಯವಹಾರಿಕ ವಿಳಾಸ ಮೊಬೈಲ್ ನಂಬರ್ ಇತ್ಯಾದಿ ವಿವರವನ್ನು ತುರ್ತಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು.**

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577002

ಗೆ,

1. ಸಹಾಯಕ ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು-ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸಿದೆ.
2. ನಿರ್ದೇಶಕರು, ದೂರದರ್ಶನ ಕೇಂದ್ರ, ಬೆಂಗಳೂರು-ಸುದ್ದಿ ರೂಪದಲ್ಲಿ ಬಿತ್ತರಿಸುವಂತೆ ಕೋರಿದೆ.
3. ಉಪನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾಭವನ, ದೇವರಾಜ ಅರಸು ಲೇಔಟ್ , ದಾವಣಗೆರೆ-ಎಲ್ಲಾ ದಿನ ಪತ್ರಿಕೆಗಳಲ್ಲಿ -ಸುದ್ದಿ ರೂಪದಲ್ಲಿ ಪ್ರಕಟಿಸುವಂತೆ ಕೋರಿದೆ.
4. ನಿರ್ದೇಶಕರು, ಆಕಾಶವಾಣಿ ಭದ್ರಾವತಿ-ಸುದ್ದಿ ರೂಪದಲ್ಲಿ ಬಿತ್ತರಿಸುವಂತೆ ಕೋರಿದೆ.
5. ವಿಶ್ವವಿದ್ಯಾನಿಲಯದ ಜಾಲತಾಣದ ಮುಖ್ಯಸ್ಥರು- ದಾವಣಗೆರೆ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಈ ಅಧಿಸೂಚನೆಯನ್ನು ಬಿತ್ತರಿಸಲು ಕೋರಿದೆ.
6. ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್, ಹಣಕಾಸು ಸಮಿತಿ ಸದಸ್ಯರುಗಳು ಮತ್ತು ನಿಕಾಯಗಳ ಡೀನರುಗಳು.
7. ದಾವಣಗೆರೆ ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಚಾರ್ಯರುಗಳಿಗೆ-ಪದವಿಪ್ರಮಾಣ ಪತ್ರಗಳಿಗಾಗಿ ಅರ್ಜಿ ನಮೂನೆಗಳನ್ನು1)ಸಂಬಂಧಿಸಿದ ಕಾಲೇಜುಗಳಿಂದ 2) ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವರು(ಪರೀಕ್ಷಾಂಗ) ಇವರ ಕಛೇರಿಯಿಂದ 3) ದಾವಣಗೆರೆ ವಿಶ್ವವಿದ್ಯಾನಿಲಯದ ಜಾಲತಾಣದಿಂದ ಡೌನ್ ಲೋಡ್ ಮೂಲಕ ಪಡೆಯುವಂತೆ ಅಭ್ಯರ್ಥಿಗಳಿಗೆ ತಿಳಿಸಲು ಸೂಚಿಸಿದೆ.
8. ಕುಲಸಚಿವರು(ಪರೀಕ್ಷಾಂಗ) ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
9. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
10. ನಿರ್ದೇಶಕರು, ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
11. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
13. ಅಧ್ಯಕ್ಷರು/ಸಂಯೋಜನಾಧಿಕಾರಿಗಳು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
14. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ.
15. ಕಾರ್ಯಪಾಲಕ ಅಭಿಯಂತರರು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
16. ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ.
17. ಕುಲಪತಿಗಳ ಆಪ್ತಕಾರ್ಯದರ್ಶಿಯವರು-ವಿಶ್ವವಿದ್ಯಾನಿಲಯದ ಗೆಜೆಟ್ ನಲ್ಲಿ ಪ್ರಕಟಿಸುವ ಸಲುವಾಗಿ.
18. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
19. ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
20. ಎಲ್ಲ ಅಧೀಕ್ಷಕರುಗಳು ಆಡಳಿತ/ಘಟಿಕೋತ್ಸವ ಶಾಖೆ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
21. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ದೃಶ್ಯಕಲಾ ಕಾಲೇಜು, ದಾವಣಗೆರೆ.
22. ಕಡತಕ್ಕೆ.